**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.60/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿ. ಹೆಚ್. ಆಂಜನೇಯ |
| ತಂದೆಯ/ಗಂಡನ ಹೆಸರು | : | ಲೇಟ್ ಹನುಮಂತಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಹೆಚ್.ಸಿ., ಲೋಕಾಯುಕ್ತ ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 11

ದಿ: 28-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿಃ 11-08-2017 ರಿಂದ ದಿಃ 31-03-2021 ರವರೆಗೆ ನಾನು RMC Yard ಪೊಲೀಸ್ ಠಾಣೆಯಲ್ಲಿ ಹೆಚ್. ಸಿ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 06-05-2018 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ನಮ್ಮ ಠಾಣೆಯ ಪಿ.ಎಸ್.ಐ. ಇಮ್ರಾನ್ ಖಾನ್ ರವರು ಚಾಸಾ-12, 14 ರಿಂದ 16 ರವರನ್ನು ಕರೆದು ದಾವಣಗೆರೆಯ ಜಿಲ್ಲಾ ಪೊಲೀಸ್ ಕಛೇರಿಯ ಡಿಸಿಐಬಿ ವಿಭಾಗದ ಪೊಲೀಸ್ ಇನ್ಸಪೆಕ್ಟರ್ ರವರಿಗೆ RMC ಪೊಲೀಸ್ ಠಾಣಾ ಸರಹದ್ದಿನ ಆವರಗೆರೆ ಎ.ಕೆ. ಕಾಲೋನಿಯಲ್ಲಿ ವೈಶ್ಯಾವಾಟಿಕೆ ನಡೆಯುತ್ತಿದೆ ಅಂತ ಮಾಹಿತಿ ಬಂದಿರುತ್ತದೆ ಅವರ ಜೊತೆ ದಾಳಿಗೆ ಹೋಗಬೇಕು ಅಂತ ಹೇಳಿ ನಮ್ಮ ಎಲ್ಲರನ್ನು ದಾವಣಗೆರೆಯ ಡಿವೈಎಸ್.ಪಿ. ಕಛೇರಿಗೆ ಕರೆದುಕೊಂಡು ಬಂದರು. ಅಲ್ಲಿ ಚಾಸಾ-1 ರವರು ನಮ್ಮನ್ನೆಲ್ಲಾ ಪರಿಚಯ ಮಾಡಿಕೊಂಡು, ಅಲ್ಲಿಗೆ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಕರೆಸಿ, ಚಾಸಾ-9 ಮತ್ತು

10 ರವರನ್ನು ಕರೆಸಿಕೊಂಡು ಎಲ್ಲರನ್ನು ಪರಿಚಯಿಸಿ ದಾಳಿಗೆ ಸಂಬಂಧಪಟ್ಟ ವಿಚಾರವನ್ನು ತಿಳಿಸಿ, ಶೋಧನಾ ವಾರೆಂಟ್ ನ್ನು ಪಡೆದುಕೊಂಡರು. ನಂತರ ಅಲ್ಲಿಂದ ಎರಡು ಇಲಾಖಾ ವಾಹನಗಳಾದ ಕೆ.ಎ. 17 ಜಿ. 550 ಮತ್ತು ಕೆ.ಎ. 17 ಜಿ. 216 ನೇದರಲ್ಲಿ ಪಂಚರು, ಸಿಬ್ಬಂದಿಗಳು, ಇನ್ಸಪೆಕ್ಟರ್, ಅಧಿಕಾರಿಗಳು ಸಂಜೆ 4.30 ಗಂಟೆಗೆ ಡಿ.ವೈ.ಎಸ್.ಪಿ. ಕಛೇರಿ ಬಿಟ್ಟು 4.45 ಗಂಟೆಗೆ ಆವರಗೆರೆ ಎ.ಕೆ. ಕಾಲೋನಿಯಲ್ಲಿ ಸ್ವಲ್ಪ ದೂರದಲ್ಲಿ ವಾಹಗಳನ್ನು ನಿಲ್ಲಿಸಿ, ಚಾಸಾ-1 ರವರು ಚಾಸಾ-17 ರವರನ್ನು ಮಂಜಮ್ಮರವರ ಮನೆಯ ಬಳಿ ಹೋಗಿ ಅಲ್ಲಿ ಏನು ನಡೆಯುತ್ತಿದೆ ಅಂತ ತಿಳಿದುಕೊಂಡು ನಮಗೆ ಸನ್ನೆ ಮಾಡಿ ತಿಳಿಸಿ ಅಂತ ಕಳುಹಿಸಿಕೊಟ್ಟರು. ಅದರಂತೆ ಚಾಸಾ-17 ರವರು ಮಂಜಮ್ಮರವರ ಮನೆಗೆ ಹೋಗಿ ಆ ಮನೆಯ ಬಾಗಿಲು ಬಡೆದಾಗ, ಒಬ್ಬ ಮಹಿಳೆ ಬಂದು ಆ ಮನೆಯ ಬಾಗಿಲನ್ನು ತೆಗೆದರು, ಅವರ ಬಳಿ ಏನೋ ಮಾತನಾಡಿ ಚಾಸಾ-17 ರವರು ನಮಗೆ ಬರಲು ಸೂಚನೆ ಮಾಡಿದರು. ನಂತರ ನಾವೆಲ್ಲರೂ ಮಂಜಮ್ಮರವರ ಮನೆಯ ಬಳಿ ಹೋದಾಗ ಮನೆಯಲ್ಲಿ ಮೊದಲಿಗೆ ಒಂದು ರೂಮ್ ನಂತರ ಹಾಲ್ ಇದ್ದು, ಮತ್ತು ಒಂದು ಅಡುಗೆ ಮನೆ ಇದ್ದು, ಹಾಲ್ ನಲ್ಲಿ ಇದ್ದಂತಹ ಮಹಿಳೆಯನ್ನು ತೋರಿಸಿ ಇವರೇ ನಾನು ಬಂದು ಬಾಗಿಲು ಬಡೆದಾಗ ಒಳಗೆ ಕರೆದಿದ್ದು, ನಾನು ಗಿರಾಕಿ ಅಂತ ಹೇಳಿದಾಗ 500-2000 ರೂಪಾಯಿ ಹಣ ಕೊಟ್ಟಿದ್ದಲ್ಲಿ ಇಲ್ಲಿ ಮಜಾ ಮಾಡಿಕೊಂಡು ಹೋಗಬಹುದು ಅಂತ ತಿಳಿಸಿದರು ಅಂತ ನಮಗೆ ಹೇಳಿದರು. ನಂತರ ಚಾಸಾ-1 ರವರು ಆ ಮಹಿಳೆಯ ಹೆಸರು ಮತ್ತು ವಿಳಾಸವನ್ನು ಕೇಳಿದಾಗ, ಅವರು ತನ್ನ ಹೆಸರು ಮಂಜಮ್ಮ ಕೋಂ ಲೇಟ್ ಸಂಜೀವಪ್ಪ, ವಾಸಃ ಎ. ಕೆ. ಕಾಲೊನಿ, ಆವರಗೆರೆ ಮತ್ತು ಇದು ನನ್ನ ಸ್ವಂತ ಮನೆಯಾಗಿದ್ದು, ಈ ಮನೆಯಲ್ಲಿ ನಾನು ಹೆಣ್ಣು ಮಕ್ಕಳನ್ನು ಕರೆಸಿ ಗಿರಾಕಿಗಳನ್ನು ಕರೆಸಿ ಅವರ ಜೊತೆ ವೈಶಾವಾಟಿಕೆ ನಡೆಸಿ ಹಣ ಸಂಪಾದಿಸುತ್ತೇನೆ ಅಂತ ಹೇಳಿದರು. ಆ ಮಹಿಳೆಯ ಜೊತೆ ಇನ್ನಿಬ್ಬರು ಮಹಿಳೆಯರು ಇದ್ದು, ಅವರನ್ನು ಚಾಸಾ-1 ರವರು ವಿಚಾರ ಮಾಡಿದಾಗ, ಒಬ್ಬರ ಹೆಸರು ಗೀತಮ್ಮ ಲೇಟ್ ರಾಜಪ್ಪ, 38 ವರ್ಷ ಮತ್ತು ಇನ್ನೊಬ್ಬರು ಗೌರಿ, ವಾಸಃ ಶಿವಮೊಗ್ಗ ಅಂತ ಹೇಳಿದರು. ನಂತರ ಅವರನ್ನು ವಿಚಾರ ಮಾಡಿದಾಗ, ಮಂಜಮ್ಮರವರು ನಮಗೆ ಹಣದ ಅವಶ್ಯಕತೆ ಇರುವುದರಿಂದ

ವೈಶಾಟವಾಟಿಕೆಯಲ್ಲಿ ತೊಡಗಿಸಿ ಹಣವನ್ನು ಸಂಪಾದನೆ ಮಾಡುತ್ತಾರೆ ಅಂತ ತಿಳಿಸಿದರು. ಚಾಸಾ-1 ರವರು ಮತ್ತೆ ಈ ಮನೆಯಲ್ಲಿ ಯಾರು ಇದ್ದಾರೆ ಅಂತ ವಿಚಾರ ಮಾಡಿದಾಗ, ರೂಮ್ ನಲ್ಲಿ ಒಬ್ಬ ಗಿರಾಕಿ ಮಹಿಳೆಯೊಂದಿಗೆ ಇದ್ದಾರೆ ಅಂತ ತಿಳಿಸಿದಾಗ, ಚಾಸಾ-1 ರವರು ಮಹಿಳಾ ಸಿಬ್ಬಂದಿಯ ಸಹಾಯದಿಂದ ಆ ರೂಮ್ ನ ಬಾಗಿಲು ತೆಗೆಸಿದರು. ಅಲ್ಲಿ ನೋಡಿದಾಗ ಒಂದು ಮಹಿಳೆ ಮತ್ತು ಒಬ್ಬ ಪುರುಷ ಇದ್ದು, ಆ ಮಹಿಳೆಯನ್ನು ವಿಚಾರಿಸಿದಾಗ, ಆ ಮಹಿಳೆಯ ಹೆಸರು ಉಮಾ ತಂದೆ ಮಹೇಶ್ವರಪ್ಪ, 21 ವರ್ಷ, ವಾಸಃ ಆವರಗೆರೆ ಎ. ಕೆ. ಕಾಲೋನಿ, ಸ್ವಂತ ಊರು ಬ್ಯಾಡಗಿ ಅಂತ ತಿಳಿಸಿದರು. ಚಾಸಾ-1 ರವರು ಯಾಕೆ ಇಲ್ಲಿ ಬಂದಿದ್ದೀರಾ ಅಂತ ಕೇಳಿದಾಗ, ಅವರು ಹಣದ ಅವಶ್ಯಕತೆ ಇರುವುದರಿಂದ ಮಂಜಮ್ಮರವರಿಗೆ ಸಂಪರ್ಕ ಮಾಡಿದಾಗ ಆಗ ಅವರು ನನ್ನ ಬಳಿ ಹಣ ಇಲ್ಲ ನನ್ನ ಬಳಿ ಗಿರಾಕಿಗಳು ಇದ್ದಾರೆ ಅವರ ಜೊತೆ ಸಹಕರಿಸಿದರೆ ಹಣ ಕೊಡುತ್ತೇನೆ ಅಂತ ಹೇಳಿದ್ದು, ನನಗೆ ಆ ಕೆಲಸದಲ್ಲಿ ಆಸಕ್ತಿ ಇಲ್ಲದಿದ್ದರೂ ಸಹ ಹಣದ ಅವಶ್ಯಕತೆ ಇರುವುದರಿಂದ ಒಪ್ಪಿಕೊಂಡೆ ಅಂತ ಹೇಳಿದರು. ಚಾಸಾ-1 ರವರು ಆ ರೂಮ್ ನಲ್ಲಿದ್ದ ಪುರುಷನನ್ನು ಹೆಸರು ಮತ್ತು ವಿಳಾಸ ಕೇಳಿದಾಗ, ಅವರು ಹೆಸರು ಶೌಕತ್ ಅಲಿ ತಂದೆ ಸುಲ್ತಾನ್ ಸಾಬ್, 25 ವರ್ಷ, ವಾಸಃ ದಾವಣಗೆರೆ ಅಂತ ಹೇಳಿದರು. ಸದರಿ ವ್ಯಕ್ತಿಯನ್ನು ವಿಚಾರ ಮಾಡಿದಾಗ, 1 ನೇ ಆರೋಪಿತಳು ಒಳ್ಳೆ ಒಳ್ಳೆ ಹೆಣ್ಣು ಮಕ್ಕಳು ಇರುತ್ತಾರೆ ಹಣ ಕೊಟ್ಟು ನೀವು ಮಜಾ ಮಾಡಿ ಹೋಗಬಹುದು ಅಂತ ಹೇಳಿದ್ದರಿಂದ ನಾನು ಈ ದಿನ ಇಲ್ಲಿಗೆ ಬಂದಿರುತ್ತೇನೆ ಅಂತ ತಿಳಿಸಿರುತ್ತಾರೆ. ಇದರಿಂದ ಆ ಮನೆಯಲ್ಲಿ ಮಂಜಮ್ಮರವರು ವೇಶ್ಯಾವಾಟಿಕೆ ನಡೆಸುತ್ತಿದ್ದರಿಂದ ಚಾಸಾ-1 ರವರು ಆ ನೊಂದ ಮಹಿಳೆಯರನ್ನು ಮತ್ತು ಆರೋಪಿತರನ್ನು ಅಲ್ಲೇ ಇರಿಸಿ, ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ, ವರದಿಯನ್ನು ಚಾಸಾ-15 ರವರಿಗೆ ಕೊಟ್ಟು ದಾವಣಗೆರೆಯ ಮಹಿಳಾ ಪೊಲೀಸ್ ಠಾಣೆಗೆ ಹೋಗಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ತೆಗೆದುಕೊಂಡು ಬನ್ನಿ ಅಂತ ಹೇಳಿದರು. ಆ ಪ್ರಕಾರ ಚಾಸಾ-15 ರವರು ದಾವಣಗೆರೆಯ ಮಹಿಳಾ ಪೊಲೀಸ್ ಠಾಣೆಗೆ ಹೋಗಿ ಚಾಸಾ-1 ರವರು ನೀಡಿದ ವರದಿಯನ್ನು ಕೊಟ್ಟು ಠಾಣಾ Cr.46/2018 ರಂತೆ ಪ್ರಕರಣವನ್ನು ದಾಖಲಿಸಿ, ವಾಪಸ್ಸು 7.15 ಗಂಟೆಗೆ ಪ್ರ.ವ.ವರದಿಯನ್ನು

ತೆಗೆದುಕೊಂಡು ಆ ಸ್ಥಳಕ್ಕೆ ಬಂದು ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತಾರೆ. ಸದರಿ ಮನೆಯನ್ನು ಪರಿಶೀಲನೆ ಮಾಡಿ ರಾತ್ರಿ 7.15 ರಿಂದ 8.15 ರವರೆಗೆ ಪಂಚನಾಮೆ ಕ್ರಮ ಜರುಗಿಸಲಾಯಿತು. ಆ ಮನೆಯ ರೂಮ್ ನಲ್ಲಿ ಒಟ್ಟು 31 ನಿರೋಧ ಪ್ಯಾಕೆಟ್ ಗಳು ಇದ್ದವು, ಅದರಲ್ಲಿ 29 ಪ್ಯಾಕೆಟ್ ಗಳು ಸೀಲ್ಡ್ ಆಗಿತ್ತು, 2 ಪ್ಯಾಕೆಟ್ ಗಳು ಓಪನ್ ಇತ್ತು. ಅವುಗಳನ್ನು ವಶಪಡಿಸಿಕೊಂಡರು. ನಂತರ ಮಹಿಳಾ ಸಿಬ್ಬಂದಿಯ ಸಹಾಯದಿಂದ ಮಂಜಮ್ಮರವರನ್ನು ಪರಿಶೀಲನೆ ಮಾಡಿದಾಗ ಅವರ ಬಳಿ 2000 ರೂಪಾಯಿ ಹಣ ಸಿಕ್ಕಿರುತ್ತದೆ. ಆ ಹಣದ ಬಗ್ಗೆ ವಿಚಾರಿಸಿದಾಗ, ವೈಶ್ಯಾವಾಟಿಕೆಯಿಂದ ಗಳಿಸಿದ ಹಣ ಅಂತ ತಿಳಿಸಿರುತ್ತಾರೆ. ಆದ್ದರಿಂದ ಆ ಹಣವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ನಂತರ ಅಲ್ಲಿಂದ ಆರೋಪಿತರನ್ನು ಮತ್ತು ನೊಂದ ಮಹಿಳೆಯರನ್ನು ಕರೆದುಕೊಂಡು ಮಹಿಳಾ ಪೊಲೀಸ್ ಠಾಣೆಗೆ ಬಂದೆವು. ಆ ದಿನ ವೈಶ್ಯಾವಾಟಿಕೆಯಲ್ಲಿ ತೊಡಗಿದ ಮಂಜಮ್ಮರವರನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದರಂತೆ ಶೌಕತ್ ಅಲಿಯವರನ್ನು ಸಹ ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಆ ದಿನ ವಶಪಡಿಸಿಕೊಂಡಿರುವಂತಹ 31 ನಿರೋಧ ಪ್ಯಾಕೆಟ್ ಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ಈಗಾಗಲೇ ಮು.ಮಾ.1 ಅಂತ ಗುರುತಿಸಲಾಗಿದೆ. 2000 ರೂಪಾಯಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.2 ಅಂತ ಗುರುತಿಸಲಾಗಿದೆ. ಮು.ಮಾ.2 ನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ಗುರುತಿಸುವ ಬಗ್ಗೆ ತಕರಾರು ಇಲ್ಲ ಅಂತ ಹೇಳುತ್ತಾರೆ. ಆ ದಿನ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-1 ಮತ್ತು 2 ಅಂತ ಗುರುತಿಸಲಾಗಿದೆ. ಆ ಪೋಟೋಗಳಲ್ಲಿ ಆರೋಪಿತರು ಮತ್ತು ಮೇಲಾಧಿಕಾರಿಗಳು ಇರುತ್ತಾರೆ. ಆ ಕೋಣೆಯ ಸಣ್ಣದು ಇರುವುದರಿಂದ ಎಲ್ಲರೂ ಪೋಟೋದಲ್ಲಿ ಬಂದಿರುವುದಿಲ್ಲ, ನಾನು ಸೈಡ್ ನಲ್ಲಿದ್ದೆ. ನಿಪಿ-3 ರಲ್ಲಿ ನನ್ನ ಸಹಿ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-3(ಬಿ) ಅಂತ ಗುರುತಿಸಲಾಯಿತು.

<u>**ಪಾಟೀ ಸವಾಲುಃ ಶ್ರೀ ಸಿ.ಟಿ.ಹೆಚ್., ವಕೀಲರಿಂದ ಆರೋಪಿತರ ಪರವಾಗಿ**:</u>

3. ನಮ್ಮ ಪೊಲೀಸ್ ಠಾಣೆಯಿಂದ ಡಿವೈ.ಎಸ್.ಪಿ. ಕಛೇರಿಯ ಒಂದು ಕೀ.ಮೀ. ಅಂತರ ಆಗುತ್ತದೆ. 10 ನಿಮಿಷದಲ್ಲಿ ನಮ್ಮ ಪೊಲೀಸ್ ಠಾಣೆಯಿಂದ ಡಿವೈ.ಎಸ್.ಪಿ. ಕಛೇರಿ ತಲುಪಬಹುದು. ನಾವು ಡಿವೈ.ಎಸ್.ಪಿ. ಕಛೇರಿಗೆ ಹೋದಾಗ ಮಹಿಳಾ ಮತ್ತು ಮಕ್ಕಳ ಆಯೋಗದ ಸಿಬ್ಬಂದಿಗಳು, ಡಿಸಿ.ಐ.ಬಿ., ಪಿ.ಐ., ಸಿಬ್ಬಂದಿಗಳು ಇದ್ದರು. ಎಲ್ಲಾ ಸಿಬ್ಬಂದಿಗಳು 4.30 ಗಂಟೆಗೆ ಕಛೇರಿಯಿಂದ ಹೊರಟು, ಅಲ್ಲಿ ತಲುಪಿದಾಗ 4.45 ಗಂಟೆ ಆಗಿತ್ತು. ಸ್ಥಳದ ಚಕ್ಕುಬಂದಿಯನ್ನು ಯಾವ ಸಿಬ್ಬಂದಿಯಿಂದ ಗೊತ್ತು ಮಾಡಿಕೊಂಡು ಬರಲು ಹೇಳಿದ್ದರು ಅಂತ ನನಗೆ ಗೊತ್ತಿಲ್ಲ. ಡಿವೈ.ಎಸ್.ಪಿ. ಕಛೇರಿಯಿಂದ ಕೃತ್ಯ ನಡೆದ ಸ್ಥಳಕ್ಕೆ ಹೋಗಲು 15 ನಿಮಿಷದ ಅವಧಿಯಾಗುತ್ತದೆ. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಮಂಜಮ್ಮರವರ ಮನೆಯ ಬಾಗಿಲು ಪಶ್ಚಿಮಕ್ಕೆ ಇರುತ್ತದೆ. ನಾವು ಮಂಜಮ್ಮರವರ ಮನೆಯಿಂದ 150 ಅಡಿ ದೂರದಲ್ಲಿ ದಕ್ಷಿಣ ದಿಕ್ಕಿಗೆ ನಿಂತಿದ್ದೆವು. ನಾವು ಅಲ್ಲಿ ನಿಂತು ನೋಡುತ್ತಿರುವಾಗ ಅಲ್ಲಿ ಯಾರೂ ಮಂಜಮ್ಮರವರ ಮನೆಗೆ ಹೋಗಿದ್ದಾಗಲಿ ಬಂದಿದ್ದಾಗಲಿ ಆಗಿಲ್ಲ. ಕೆಲವು ಪೊಲೀಸರು ಆ ದಿನ ಮಪ್ತಿನಲ್ಲಿದ್ದರು ಕೆಲವು ಪೊಲೀಸರು ಸಮವಸ್ತ್ರ ಧರಿಸಿದ್ದರು. ಆ ದಿನ ಚಾಸಾ-1 ರವರು ಚಾಸಾ-17 ರವರಿಗೆ ಮಂಜಮ್ಮರವರ ಮನೆಗೆ ಕಳುಹಿಸುವಾಗ ದುಡ್ಡು ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ-17 ರವರಿಗೆ ಗಿರಾಕಿ ರೀತಿಯಲ್ಲಿ ವರ್ತನೆ ಮಾಡಲು ಕಳುಹಿಸಿದ್ದೆವು. ಚಾಸಾ-17 ರವರು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಅಂತ ನೆನಪಿಲ್ಲ. ಚಾಸಾ-17 ರವರು ಕೈ ಸನ್ನೆ ಮಾಡಿ ನಮಗೆ ಬರಲು ಹೇಳಿದರು. ಚಾಸಾ-17 ರವರು ಮಂಜಮ್ಮರವರ ಮನೆಗೆ ಹೋಗುವುದಾಗಲಿ ಮತ್ತು ಅವರು ಕೈ ಸನ್ನೆ ಮಾಡುವುದು ವಿಡಿಯೋ ರೆಕಾರ್ಡಿಂಗ್ ಮಾಡಿಲ್ಲ. ನಾವು ಹೋದಂತಹ ಮನೆಯ ಡೋರ್ ನಂಬರ 35 ಇರಬಹುದು. ಅದು ಆರ್.ಸಿ.ಸಿ. ಮನೆ ಇರುತ್ತದೆ. ಅದಕ್ಕೆ ಮೇಲ ಹಂತಸ್ತಿನ ಮನೆ ಇಲ್ಲ. ಮನೆಯ ಒಳಗಡೆ ಹೋಗುತ್ತಿರುವುದಾಗಲಿ ಮನೆಯಲ್ಲಿ ಮಹಿಳೆಯರು ಮತ್ತು ಪುರುಷ ಇದ್ದ ಬಗ್ಗೆ ವಿಡಿಯೋಗ್ರಾಫಿ ಮಾಡಿಲ್ಲ. 31 ಕಾಂಡಮ್ ಗಳ ಪೈಕಿ ಎರಡು ಬಳಸಿದ ಕಾಂಡಮ್ ಗಳು ಇದ್ದವು. ಬಳಕೆಯಾದ ಎರಡು

ಕಾಂಡಮ್ ಗಳನ್ನು ಯಾರು ಬಳಸಿದ್ದರು ಅಂತ ನನಗೆ ಗೊತ್ತಿಲ್ಲ. ಆ 2000 ರೂಪಾಯಿಗಳಲ್ಲಿ ಯಾವ ನೋಟು ಎಷ್ಟರದ್ದು ಇತ್ತು ನೆನಪಿಲ್ಲ. ಈ ಪಂಚನಾಮೆಯನ್ನು ಮಾಡುವಾಗ ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಿದರು. ಅಲ್ಲಿ ಸ್ಥಳೀಯ ಹೆಣ್ಣು ಮಕ್ಕಳಿಂದ ಪಂಚನಾಮೆಗೆ ಸಹಿ ಮಾಡಿಸಿಲ್ಲ. ಆ ದಿನ ನಾವು ದಾಳಿ ನಡೆಸಲು ಹೋಗಿದ್ದಾಗಲಿ, ಆರೋಪಿತರ ಮನೆಯಲ್ಲಿ ಮು.ಮಾ.1 ಸಿಕ್ಕಿದ್ದಾಗಲಿ, ಅಲ್ಲಿ ಪುರುಷರು ಮತ್ತು ಮಹಿಳೆಯರು ಇದ್ದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ದೂರು ತಯಾರಿಸಿದ್ದು ಅಂತ ಸುಳ್ಳು ಹೇಳುತ್ತಿದ್ದೇನೆ. ಈ ಪ್ರಕರಣಕ್ಕೋಸ್ಕರ ಮುದ್ದೆ ಮಾಲುಗಳನ್ನು ಸೃಷ್ಟಿ ಮಾಡಿದ್ದು ಅಂದರೆ ಸರಿಯಲ್ಲ. ಮು.ಮಾ1 ರ ಮೇಲೆ ನನ್ನ ಮತ್ತು ಪಂಚರ ಸಹಿ ಇಲ್ಲ. ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ಮು.ಮಾ.1 ನ್ನು ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ನ್ನು ಸ್ಥಳದಲ್ಲಿ ನೋಡಿದ್ದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಪಂಚನಾಮೆ ತಯಾರಿಸಿಲ್ಲ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲಾ ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.